ಚಾ.ಸಾಃ 23, ಫ್ರಾ.ಸಾಃ 12

**ಸಾಕ್ಷಿಯನ್ನು ದಿನಾಂಕ 06-06-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ಈ ಪ್ರಕರಣದಲ್ಲಿ ಪಂಚರನ್ನು ಸಿಬ್ಬಂದಿಯವರ ಮೂಲಕ ನಾನು ಠಾಣೆಗೆ ಕರೆಸಿಕೊಂಡಿರುತ್ತೇನೆ. ಗುನ್ನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಗುನ್ನಾ ಸ್ಥಳದ ಮಾಹಿತಿಯನ್ನು ಆರೋಪಿತರು ಸ್ವ ಖುಷಿ ಹೇಳಿಕೆಯಲ್ಲಿ ನೀಡಿದ್ದರು. ನಾನು ಪ್ರಥಮತಃ ಪಿರ್ಯಾದಿಯ ಮನೆಯ ಹತ್ತಿರ ಹೋದಾಗ ಪಿರ್ಯಾದಿ ಇದ್ದರು. ನಾನು ಪಿರ್ಯಾದಿಯ ಮನೆಗೆ ಹೋದಾಗ ಆಕೆ ಏನೆಲ್ಲ ಕಳೆದು ಹೋಗಿದೆ ಅಂತ ಹೇಳಿ ಕಪಾಟಿನ ಬಾಗಿಲು ತೆಗೆದು ಕಳುವು ಸ್ಥಳವನ್ನು ತೋರಿಸಿರುತ್ತಾಳೆ. ಈ ಪ್ರಕರಣದ ಕಳುವು ಮಾಲುಗಳನ್ನು ಅನಿಲ್ ಅಣ್ಣಪ್ಪ ಶೇಟ್‌ರವರು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಕಳುವು ಮಾಲನ್ನು ಹಾಜರುಪಡಿಸುವಂತೆ ನಾವು ನೋಟೀಸು ಕೊಟ್ಟಿರಲಿಲ್ಲ. ಆತನಿಗೆ ವಿಚಾರ ಗೊತ್ತಾಗಿ ಸ್ವತಃ ತಾನೇ ತಂದು ಕಳುವು ಮಾಲುಗಳನ್ನು ಠಾಣೆಗೆ ಹಾಜರುಪಡಿಸಿರುತ್ತಾರೆ. ಸದರಿ ಒಡವೆಗಳನ್ನು ಹಾಜರುಪಡಿಸುವ ಕಾಲಕ್ಕೆ ಪಿರ್ಯಾದುದಾರರು ಠಾಣೆಯಲ್ಲಿಯೇ ಇದ್ದು ತಮ್ಮ ಒಡವೆಗಳನ್ನು ಗುರುತಿಸಿರುತ್ತಾರೆ. ನಾನು ಅನಿಲ್ ಶೇಟ್ ರವರ ಮನೆಯ ಹತ್ತಿರ ಅಂಗಡಿಗೆ ಹೋಗಿಲ್ಲ. ನಾನು ಹೇಳಿದಂತೆ ಅನಿಲ್ ಶೇಟರವರು ಯಾವುದೇ ಒಡವೆಗಳನ್ನು ತಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿ ಠಾಣೆಯಲ್ಲಿ ಇರಲೇ ಇಲ್ಲ ಯಾವುದೇ ಒಡವೆಗಳನ್ನು ಗುರುತು ಮಾಡಲಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಪಂಚನಾಮೆ ಮಾಡಿಲ್ಲ, ಒಡವೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ನಾನು 1998 ರಿಂದ 2003 ರ ವರೆಗೆ ಹೊನ್ನಾವರ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆ. 2015 ರಿಂದ 2019 ರವರೆಗೆ ಹೊನ್ನಾವರ ಕರಾವಳಿ ಕಾವಲು ಪೋಲೀಸ್ ಠಾಣೆಯಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ 2019 ರಿಂದ 2020 ರ ಸಾಲಿನಲ್ಲಿ ಹೊನ್ನಾವರ ವೃತ್ತದ ವೃತ್ತನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಹೊನ್ನಾವರದ ನನ್ನ ಸಂಪೂರ್ಣ ಕರ್ತವ್ಯದ ಅವಧಿಯಲ್ಲಿ ಭೌಗೋಳಿಕವಾಗಿ ಹೊನ್ನಾವರದ ಬಗ್ಗೆ ಮತ್ತು ಸಾಕಷ್ಟು ಜನರುಗಳ ಬಗ್ಗೆ ಮಾಹಿತಿ ಇದೆ. ಹೊನ್ನಾವರದಿಂದ ಉತ್ತರಕ್ಕೆ ಹೋದರೆ ಮೊದಲು ಕರ್ಕಿ ಪಂಚಾಯತಿ, ನಂತರ ಹಳದೀಪುರ ಪಂಚಾಯತಿ, ನಂತರ ನವಿಲಗೋಣ ಪಂಚಾಯತಿ, ನಂತರ ಕಡತೋಕಾ ಪಂಚಾಯತಿ, ನಂತರ ಚಂದಾವರ ಪಂಚಾಯತಿ, ನಂತರ ಕಢ್ಲೆ ಪಂಚಾಯತಿ ಇದೆ. ಒಂದು ಪಂಚಾಯತಿಯಿಂದ ಇನ್ನೊಂದು ಪಂಚಾಯತಿಗೆ ಸುಮಾರು 8-10 ಕಿಲೋಮೀಟರ್ ದೂರ ಇದೆ. ಒಂದು ಪಂಚಾಯತಿಯಿಂದ ಇನ್ನೊಂದು ಪಂಚಾಯತಿಗೆ ಹೋಗಲು 10 ನಿಮಿಷದಿಂದ ಅರ್ಧಗಂಟೆ ಬೇಕಾಗುತ್ತದೆ. ಎಲ್ಲಾ ಪಂಚಾಯತಿಗಳು ಹಳ್ಳಿಯ ವ್ಯಾಪ್ತಿಯಲ್ಲಿವೆ.

ದಿನಾಂಕ 09-03-2020 ರಂದು ಘಟನಾ ಸ್ಥಳಕ್ಕೆ ಹೋಗುವಾಗ ದಾರಿಯಲ್ಲಿ ಸಿಕ್ಕಿದವರನ್ನು ಪಂಚರನ್ನಾಗಿ ಕರೆದಿರುತ್ತೇನೆ. ಈ ಪ್ರಕರಣದ ಪಿರ್ಯಾದಿಯ ಮನೆಯ ಮುಂಬಾಗಿಲು ಉತ್ತರ ದಿಕ್ಕಿಗೆ ಮುಖ ಮಾಡಿದೆ. ಪಂಚನಾಮೆಯನ್ನು ನಾನು ಬರೆದಿಲ್ಲ, ಸಿಬ್ಬಂದಿ ಮೂಲಕ ಪಂಚರು ಹೇಳಿದಂತೆ

ಬರೆಸಿರುತ್ತಾರೆ. ನನ್ನ ನಿರ್ದೇಶನದಂತೆ ಪಂಚನಾಮೆ ತಯಾರಿಸಲಾಗಿದೆ. ನಾನು ಪಿರ್ಯಾದಿಯ ಮನೆಯ ಹತ್ತಿರ ಹೋಗಿಲ್ಲ, ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

ದಿನಾಂಕ 31-07-2021ರಂದು 2 ಜನ ಚಂದಾವರ ಕಡೆಯಿಂದ ಬೈಕ್‌ನಲ್ಲಿ ಬರುತ್ತಿದ್ದರು. ಅವರು ಸಂಶಯಾಸ್ಪದವಾಗಿದ್ದದ್ದರಿಂದ ವಿಚಾರಿಸಿದಾಗ ಅವರು ಸರಿಯಾದ ಉತ್ತರ ನೀಡಲಿಲ್ಲ. ಅದೇ ಕಾರಣಕ್ಕೆ ಸಂಶಯದಿಂದಲೇ ಅವರನ್ನು ಇಲಾಖಾ ವಾಹನದಲ್ಲಿ ಕೂರಿಸಿಕೊಂಡು ಕರೆದುಕೊಂಡು ಬಂದಿರುತ್ತೇವೆ. ಅವರು ಹೋಗುತ್ತಿದ್ದ ಬೈಕನ್ನು ಸಿಬ್ಬಂದಿಯ ಸಹಾಯದಿಂದ ಠಾಣೆಗೆ ನನ್ನ ಜೊತೆಯಲ್ಲೇ ತರಿಸಿಕೊಂಡಿರುತ್ತೇನೆ. ಆ ಕಾಲಕ್ಕೆ ಅವರಿಬ್ಬರ ಕೈಯಲ್ಲಾಗಲೀ ಅಥವಾ ಬೈಕಿನಲ್ಲಾಗಲೀ ಕಳ್ಳತನಕ್ಕೆ ಸಂಬಂಧಪಟ್ಟ ಯಾವುದೇ ವಸ್ತುಗಳು ಇರಲಿಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಾಗ ಅದಕ್ಕೆ ಪಂಚರ ಸಹಿ ಇರುವ ಚೀಟಿ ಅಂಟಿಸುತ್ತೇವೆ ಎಂದರೆ ಸರಿ. ಆರೋಪಿತರ ಮನೆಯ ಹತ್ತಿರ ಹೋಗಿ ಪರಿಶೀಲಿಸಿದ ಕಾರಿನಲ್ಲಿ 2 ರಾಡ್‌ಗಳು ಇದ್ದವು. ಸದರಿ ರಾಡಗಳನ್ನು ಮತ್ತು ಕಾರನ್ನು ಆರೋಪಿತರೇ ತೋರಿಸಿರುತ್ತಾರೆ. ಜಪ್ತು ಮಾಡಿಕೊಂಡಿದ್ದ ಎರಡೂ ಕಬ್ಬಿಣದ ರಾಡುಗಳ ಮೇಲೆ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಿರುತ್ತೇವೆ. ನಾನು ಅಮಾನತ್ತುಪಡಿಸಿಕೊಂಡಿರುವ ಕಬ್ಬಿಣದ ರಾಡ್‌ಗಳ ತರಹ ಬಹಳಷ್ಟು ರಾಡ್‌ಗಳು ಸಿಗುತ್ತವೆ ಎಂದರೆ ಸರಿ. ಆರೋಪಿತರ ಮನೆಯ ಹತ್ತಿರ ಯಾವುದೇ ಕಾರಿನಲ್ಲಿ ಯಾವುದೇ ರಾಡ್‌ಗಳು ಇಲ್ಲದೇ ಇದ್ದರೂ ಕೇಸಿಗೆ ಅನುಕಾಲವಾಗುವಂತೆ ರಾಡಗಳನ್ನು ನಾವೇ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಆರೋಪಿತರ ಮನೆಗೆ ಹೋಗೇ ಇಲ್ಲ ಮತ್ತು ಆರೋಪಿತರ ಮನೆಯಲ್ಲಿ ಯಾವುದೇ ಬಂಗಾರದ ಒಡವೆಗಳನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

ಆರೋಪಿತರ ಸ್ವಖುಷಿ ಹೇಳಿಕೆ ಪಡೆದುಕೊಂಡಾಗ ಅವರನ್ನು ಇನ್ನೂ ದಸ್ತಗಿರಿ ಮಾಡಿರಲಿಲ್ಲ. ಅವರ ವಿಚಾರಣೆಯ ಕಾಲಕ್ಕೆ ಹೇಳಿಕೆ ಪಡೆದುಕೊಂಡಿರುತ್ತೇನೆ. ಸ್ವ ಖುಷಿ ಹೇಳಿಕೆಯ ಮೇಲೆ ಆರೋಪಿತರ ಸಹಿ ತೆಗೆದುಕೊಂಡಿದ್ದೇನೆ. ಸಾಕ್ಷಿದಾರರ ಸಹಿ ತೆಗೆದುಕೊಂಡಿರುವುದಿಲ್ಲ. ಸ್ವಖುಷಿ ಹೇಳಿಕೆಯ ಆಧಾರದಲ್ಲಿಯೇ ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಳ್ಳಲು ಕುಮಟಾದ ಮಣಪ್ಪುರಂ ಫೈನಾನ್ಸಗೆ ಹೋಗಿರುತ್ತೇನೆ. ಸದರಿ ಫೈನಾನ್ಸ ನೊಂದಣಿಯಾಗಿರುವ ಬಂಗಾರವನ್ನು ಅಡವು ಇಟ್ಟುಕೊಳ್ಳುವ ಅಧಿಕೃತ ಸಂಸ್ಥೆಯಾಗಿರುತ್ತದೆ. ಸದರಿ ಫೈನಾನ್ಸನಲ್ಲಿ ಸಿಸಿಟಿವಿ ಕ್ಯಾಮರಾ ಇದೆ. ಆರೋಪಿತರು ಬಂಗಾರವನ್ನು ಅಡವು ಇಟ್ಟ ಬಗ್ಗೆ ಸದರಿ ಫೈನಾನ್ಸನಲ್ಲಿ ರಶೀದಿಗಳು ಇದ್ದವು. ಅವುಗಳನ್ನು ಪರಿಶೀಲಿಸಿದ್ದೇನೆ, ಆದರೆ ಅವುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಪಾವತಿ ರಸೀದಿಗಳನ್ನು ಜಪ್ತುಪಡಿಸಿಕೊಳ್ಳಲು ತೊಂದರೆ ಇರಲಿಲ್ಲ. ಆರೋಪಿತರು ಬಂಗಾರ ಇಡುವ ಕಾಲಕ್ಕೆ ರೆಕಾರ್ಡ ಆಗಿರಬಹುದಾದ ಸಿಸಿಟಿವಿ ಫುಟೇಜನ್ನು ಅಮಾನತ್ತುಪಡಿಸಿಕೊಂಡಿಲ್ಲ. ಆರೋಪಿತರಿಂದ ಹಣವನ್ನು ಗಿರವಿ ಇಟ್ಟುಕೊಂಡ ಸಿಬ್ಬಂದಿಗಳನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿಲ್ಲ, ಮ್ಯಾನೇಜರ್ ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಾನು ಯಾವುದೇ ಫೈನಾನ್ಸಗೆ ಹೋಗಿಲ್ಲ, ಯಾವುದೇ ಒಡವೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ

ಸರಿಯಲ್ಲ. ಬಸ್ತಿಪೇಟೆ ಮಣಪ್ಪುರಂ ಶಾಖೆಗೆ ಭೇಟಿ ನೀಡಿದಾಗಲೂ ಗಿರವಿ ಇಟ್ಟ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಆದರೆ ಅವುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಿಸಿಟಿವಿ ಫುಟೇಜನ್ನೂ ಅಮಾನತ್ತುಪಡಿಸಿಕೊಂಡಿಲ್ಲ. ಅಲ್ಲಿಯೂ ಸಹ ಆರೋಪಿತರಿಂದ ಹಣವನ್ನು ಗಿರವಿ ಇಟ್ಟುಕೊಂಡ ಸಿಬ್ಬಂದಿಗಳನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿಲ್ಲ, ಮ್ಯಾನೇಜರ್ ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಾನು ಯಾವುದೇ ಫೈನಾನ್ಸಗೆ ಹೋಗಿಲ್ಲ, ಯಾವುದೇ ಒಡವೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ದಿನಾಂಕ 04-08-2020 ರಂದು ಪೋಲೀಸ್ ಕಸ್ಟಡಿಗೆ ಪಡೆದುಕೊಂಡ ನಂತರ ಆರೋಪಿತರು ನಮ್ಮನ್ನು ಕರೆದುಕೊಂಡು ಹೋದ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಕಪಾಟು ಒಡೆದಿದ್ದನ್ನು ತೋರಿಸಿದ್ದರು. ಅದನ್ನು ಪರಿಶೀಲಿಸಿರುತ್ತೇನೆ. ಮನೆಯ ಹಿಂಭಾಗದ ಮೇಲಿಂದ ಹತ್ತಿ ಮಾಳಿಗೆ ಡೋರನ್ನು ಒಡದು ಮನೆಯ ಒಳಕ್ಕೆ ಬಂದಿರುತ್ತಾರೆ. ಸದರಿ ಡೋರಿಗೆ ಚಾವಿ ಇರಲಿಲ್ಲ. ಡೋರನ್ನು ಒಡೆದು ಒಳಗಿನಿಂದ ಚಿಲಕ ತೆಗೆದು ಮೆಟ್ಟಿಲಿನಿಂದ ಇಳಿದು ಬೆಡ್‌ರೂಂಗೆ ಹೋಗಿ ಕಾಪಟಿನಲ್ಲಿದ್ದ ಒಡವೆ ಕಳ್ಳತನ ಮಾಡಿರುತ್ತಾರೆ. ಕಳ್ಳತನ ಆದ ನಂತರ ಸದರಿ ಸ್ಥಳಕ್ಕೆ ಶ್ವಾನದಳವನ್ನು ಕರೆಸಿ ಪರಿಶೀಲಿಸಲಾಗಿದ್ದು ಈ ಬಗ್ಗೆ ಪ್ರಮಾಣಪತ್ರವನ್ನು ನೀಡಲಾಗಿರುತ್ತದೆ. ಶ್ವಾನದಳ ಕರೆದುಕೊಂಡು ಬಂದ ಸಿಬ್ಬಂದಿಯ ಹೇಳಿಕೆ ಪಡೆದುಕೊಂಡಿರುವುದಿಲ್ಲ. ದಿನಾಂಕ 04-08-2020 ರ ಪಂಚನಾಮೆಯನ್ನು ನಾನು ಬರೆದಿಲ್ಲ, ಠಾಣಾ ಸಿಬ್ಬಂದಿ ಬರೆದಿರುತ್ತಾರೆ. ದಿನಾಂಕ 04-08-2020 ರಂದು ನಾನು ಹೇಳಿರುವಂತೆ ಆರೋಪಿತರು ನಮ್ಮನ್ನು ಯಾವುದೇ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಪಿರ್ಯಾದಿಯ ಮನೆಯಿಂದ ಜಡ್ಡಿಗದ್ದೆ ಸುಮಾರು 4-5 ಕಿಲೋಮೀಟರ್ ದೂರ ಆಗುತ್ತದೆ. ಒಡೆದ ಬೀಗವನ್ನು ಹಿಂದಿನ ತನಿಖಾಧಿಕಾರಿಗಳು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಪಿರ್ಯಾದಿಯ ಮನೆಯಿಂದ ಜಡ್ಡಿಗದ್ದೆ ಕ್ರಾಸಗೆ ಹೋಗಿರುತ್ತೇವೆ. ಹೆಬ್ಬಾನಕೇರಿ ಕ್ರಾಸ್ ರಸ್ತೆಯು ದಕ್ಷಿಣದಿಂದ ಉತ್ತರಾಭಿ ಮುಖವಾಗಿದೆ. ಹೆಬ್ಬಾನಕೇರಿಯ ಕಳುವು ಮನೆ ರಸ್ತೆಯ ಎಡಭಾಗಕ್ಕೆ ಇದೆ. ನಾನು ಸದರಿ ಮನೆಯ ಹತ್ತಿರ ಹೋದಾಗ ಅಲ್ಲಿ ಕಳುವಿಗೆ ಸಂಬಂಧಪಟ್ಟ ಸಾಮಾನುಗಳು ಇರಲಿಲ್ಲ. ಆದರೆ ಆರೋಪಿತರೇ ಕಿಟಕಿಯನ್ನು ಒಡೆದು ರಾಡನ್ನು ತೆಗೆದು ಒಳಗೆ ಹೋದ ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಮನೆಯಲ್ಲಿ ಬಂಗಾರದ ಒಡವೆಗಳು ಕಪಾಟಿನಲ್ಲಿ ಇದ್ದವು ಎಂಬುದಾಗಿ ಆರೋಪಿತರು ತೋರಿಸಿರುತ್ತಾರೆ.

ಕೆಕ್ಕಾರ ಕ್ರಾಸ್ ಹತ್ತಿರ ಹೋದಾಗ ಸಂಜೆ 04-40 ಆಗಿತ್ತು. ಹೆಬ್ಬಾನಕೆರೆಯಿಂದ ಕೆಕ್ಕಾರ ಕ್ರಾಸ್‌ಗೆ ಹೋಗಲು ಸುಮಾರು 15 ನಿಮಿಷ ಬೇಕು. ಕೆಕ್ಕಾರ ಕ್ರಾಸನಲ್ಲಿ ಪಂಚನಾಮೆಯನ್ನು 04-40 ರಿಂದ 04-55 ರ ವರೆಗೆ ಮಾಡಿರುತ್ತೇನೆ. ಕೆಕ್ಕಾರ ಕ್ರಾಸನಿಂದ ಹೊದ್ಕೆಶಿರೂರಿನ ಹೂವಿನಹಿತ್ಲದ ಮನೆಗೆ ಹೋಗಿರುತ್ತೇವೆ. ಕೆಕ್ಕಾರ ಕ್ರಾಸನಿಂದ ಹೊದ್ಕೆಶಿರೂರಿನ ಹೂವಿನಹಿತ್ಲಕ್ಕೆ ಹೋಗಲು ಸುಮಾರು 10 ನಿಮಿಷ ಸಮಯ ಬೇಕು. ನಾವು ಹೂವಿನಹಿತ್ಲ ಮನೆಗೆ ಪಂಚನಾಮೆ ಮಾಡಲು ಹೋಗೇ ಇಲ್ಲ

ಎಂದರೆ ಸರಿಯಲ್ಲ. ಹೂವಿನಹಿತ್ಲದ ಮನೆ ಹಂಚಿನ ಮನೆ ಆಗಿರುತ್ತದೆ. ಸದರಿ ಹಂಚಿನ ಮನೆಯ ಬಾಗಿಲಿನ ಬೀಗ ಮುರಿದು ಒಳಗೆ ಹೋಗಿ ಕಪಾಟನ್ನು ತೆರೆದು ಒಡವೆ ಕಳ್ಳತನ ಮಾಡಿರುತ್ತಾರೆ. ನಾನು ಒಡೆದ ಬೀಗವನ್ನು ಅಮಾನತ್ತುಪಡಿಸಿಕೊಂಡಿಲ್ಲ, ಹಿಂದಿನ ತನಿಖಾಧಿಕಾರಿ ವಶಪಡಿಸಿಕೊಂಡಿರುತ್ತಾರೆ.

ಹೂವಿನಹಿತ್ಲದ ಮನೆಯಿಂದ ಚಂದಾವರದ ನೂರಾನಿ ಮೊಹಲ್ಲಾದ ಒಂದು ಮನೆಗೆ ಹೋಗಿರುತ್ತೇವೆ. ಆರೋಪಿತರು ಸದರಿ ಮನೆಗೆ ಹಾಕಿದ್ದ ಬೀಗವನ್ನೂ ಒಡೆದು ಬೆಡ್ ರೂಮನಲ್ಲಿ ಕಪಾಟಿನಲ್ಲಿದ್ದ ಹಣ ಮತ್ತು ಒಡವೆಗಳನ್ನು ಕಳ್ಳತನ ಮಾಡಿರುತ್ತಾರೆ. ಸದರಿ ಮನೆಗೆ ಹಾಕಿದ್ದ ಬೀಗವನ್ನು ಅಮಾನತ್ತುಪಡಿಸಿಕೊಂಡಿದ್ದಾರೋ ಇಲ್ಲವೋ ನಾನು ವಿಚಾರಿಸಿಲ್ಲ. ಹೂವಿನಹಿತ್ಲದ ಕಳುವು ಆಗಿದ್ದ ಮನೆಯು ರಸ್ತೆಯಿಂದ ಅರ್ಧ ಕಿಲೋಮೀಟರ್ ಇದ್ದು ಅಲ್ಲಿಗೆ ತೋಟದ ಮೂಲಕ ನಡೆದುಕೊಂಡು ಹೋಗಿರುತ್ತೇವೆ. ಸದರಿ ಮನೆಗೆ ನಾವು ಹೋಗೇ ಇಲ್ಲ, ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಗಣಪತಿ ದೇವಸ್ಥಾನದ ಕೇರಿಯ ಒಂದು ಮನೆಯು ನೂರಾನಿ ಮೊಹಲ್ಲಾದಿಂದ ಹತ್ತಿರದಲ್ಲೇ ಇದ್ದು ನಡೆದುಕೊಂಡು ಹೋಗಿದ್ದೆವು. ನೂರಾನಿ ಮೊಹಲ್ಲಾದಿಂದ ನಾನು ಜೀಪಿನಲ್ಲಿ ಗಣಪತಿ ದೇವಸ್ಥಾನದ ಹಿಂದೆ ಹೋಗಿ ನಿಲ್ಲಿಸಿರುತ್ತೇವೆ. ನೂರಾನಿ ಮೊಹಲ್ಲಾದಿಂದ ಗಣಪತಿ ದೇವಸ್ಥಾನ ಸುಮಾರು 2 ಕಿಲೋಮೀಟರ್ ದೂರ ಇದೆ. ಆ ದಿನ ನಾನು ದೇವಸ್ಥಾನದ ಹತ್ತಿರ ಹೋಗಿಲ್ಲ, ದೇವಸ್ಥಾನದ ಹತ್ತಿರದ ಮನೆಗೆ ಹೋಗಿರುತ್ತೇನೆ. ಆರೋಪಿತರು ಸದರಿ ಮನೆಯ ಬೀಗವನ್ನೂ ಸಹ ಮುರಿದು ಮನೆಯ ಒಳಗೆ ಹೋಗಿ ಕಳ್ಳತನ ಮಾಡಿರುತ್ತಾರೆ. ಸದರಿ ಮನೆಯಲ್ಲಿ ನಾನು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ದೇವಸ್ಥಾನದಲ್ಲಿ ಕಾಣಿಕೆ ಡಬ್ಬಿ ಕಳ್ಳತನ ಆದ ಬಗ್ಗೆ ತನಿಖೆಯನ್ನು ಹಿಂದಿನ ತನಿಖಾಧಿಕಾರಿಗಳು ಮಾಡಿದ್ದು ಅವರೇ ಕಾಣಿಕೆ ಡಬ್ಬಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಅವರೇ ಪಿಎಫ್. ಹಾಕಿರುತ್ತಾರೆ. ಕಾಣಿಕೆ ಡಬ್ಬಿಯಲ್ಲಿದ್ದ ಹಣವನ್ನು ಆರೋಪಿತರೇ ಖರ್ಚು ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ನಾನು ಆರೋಪಿತರನ್ನು ಯಾವುದೇ ದೇವಸ್ಥಾನದ ಹತ್ತಿರ ಕರೆದುಕೊಂಡು ಹೋಗಿಲ್ಲ, ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಚಂದಾವರದಿಂದ ಹಳದೀಪುರಕ್ಕೆ ಬರಲು 20 ನಿಮಿಷ ಬೇಕು. ಹಳದೀಪುರದ ಮನೆಯ ಹಿಂಬದಿಯ ಬಾಗಿಲಿನಿಂದ ಒಳಗೆ ಹೋಗಿ ಕಳ್ಳತನ ಮಾಡಿರುತ್ತಾರೆ. ಸದರಿ ಮನೆಯು ಹೊಸದಾಗಿ ಕಟ್ಟುತ್ತಿದ್ದ ಮನೆಯಾಗಿರುತ್ತದೆ. ಸದರಿ ಸ್ಥಳದಲ್ಲಿ ನಾನು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಹಿಂದಿನ ತನಿಖಾಧಿಕಾರಿಗಳು ಮಾಡಿರುತ್ತಾರೆ ಮತ್ತು ಈ ಬಗ್ಗೆ ಪಿಎಫ್ ಹಾಕಿರುತ್ತಾರೆ. ನಾನು ಹೇಳಿರುವಂತೆ ಆರೋಪಿತರು ಯಾವುದೇ ಮನೆಯಲ್ಲಿ ಯಾವುದೇ ಬಂಗಾರವನ್ನು ಕಳುವು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಯಾವುದೇ ಮನೆಯ ಕಳ್ಳತನಕ್ಕೂ ಆರೋಪಿತರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಆರೋಪಿತರು ಚಾಸಾ-13 ರಿಂದ 15 ರವರ ಬಳಿ ಯಾವುದೇ ಒಡವೆ ಅಡವು ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-13 ರಿಂದ 15 ರವರ ಬಳಿ ಒಡವೆಗಳನ್ನು ಅಡವು ಇಟ್ಟಿರುವ ಬಗ್ಗೆ ಅವರಿಂದ ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಚಾಸಾ-13 ರಿಂದ 15 ರವರು

ಆರೋಪಿತರಿಂದ ಒಡವೆಗಳನ್ನು ಇಟ್ಟುಕೊಂಡ ಬಗ್ಗೆ ಯಾವುದೇ ದಾಖಲೆಗಳನ್ನು ಇಟ್ಟುಕೊಂಡಿರುವುದಿಲ್ಲ. ವಿಚಾರಿಸಿದಾಗ ಆರೋಪಿತರು ತಂಗಿಯ ಮದುವೆಯ ಕಾರಣಕ್ಕೆ ಹಣದ ಅವಶ್ಯಕತೆ ಇದ್ದದ್ದರಿಂದ ಸದರಿ ಒಡವೆ ಇಟ್ಟುಕೊಂಡು ಹಣ ಕೊಡುವಂತೆ ಕೇಳಿದ್ದು ಅದರಂತೆ ಅವರು ಹಣ ಕೊಟ್ಟಿರುತ್ತಾರೆ. ಆ ಕಾರಣಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿ ವ್ಯವಹಾರವು ಬಾಯಿಮಾತಿನ ವ್ಯವಹಾರವಾಗಿರುತ್ತದೆ. ಆರೋಪಿತರಿಗೂ ಚಾಸಾ-13 ರಿಂದ 15 ರವರಿಗೂ ಯಾವುದೇ ವ್ಯವಹಾರವೇ ಇಲ್ಲ ಎಂದರೆ ಸರಿಯಲ್ಲ. ಚಾಸಾ-13 ರಿಂದ 15 ಯಾವುದೇ ಒಡವೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-16 ರವರು ಯಾವುದೇ ಒಡವೆಗಳನ್ನು ತೂಕ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ-15 ರವರು ಯಾವುದೇ ಒಡವೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿ ಪಂಚನಾಮೆಯನ್ನು ಸ್ಥಳದಲ್ಲಿ ಬರೆದಿಲ್ಲ, ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಠಾಣಾ ಪಿಎಫ್ ಸಂಖ್ಯೆಃ 113/2020 ರ ಒಂದು ಉಂಗುರ ಮತ್ತು ಸಿಸಿ 89/2020 ರಲ್ಲಿನ ಪಿಎಫ್‌ನ 1 ರಿಂದ 3 ನೇ ಸ್ವತ್ತುಗಳು, 4 ಉಂಗುರ, 3 ಚೈನು, ಒಂದು ಬಳೆ, ಸಿಸಿ 91/2020 ರಲ್ಲಿನ ಪಿಎಫ್ 113/2020 ರ 4 ನೇ ಸ್ವತ್ತು ಕಿವಿಯೋಲೆ ಆರೋಪಿತರಿಗೆ ಸಂಬಂಧಪಟ್ಟಿದ್ದು ಅವರು ಫೈನಾನ್ಸಲ್ಲಿ ಇಟ್ಟಿದ್ದ ಒಡವೆಗಳನ್ನು ಈ ಕೇಸಿನಲ್ಲಿ ವಿನಃ ಕಾರಣ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಒಡವೆಗಳು ಆರೋಪಿತರ ತಂಗಿ ಮತ್ತು ತಾಯಿಗೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ಒಡವೆಗಳು ತಮ್ಮ ಒಡವೆಗಳು ಎಂದು ಮನೆಯಿಂದ ಕಳ್ಳತನ ಆದ ಮನೆಯ ಮಾಲೀಕರುಗಳು ಗುರುತಿಸಿರುತ್ತಾರೆ ಎನ್ನುತ್ತಾರೆ. ಆರೋಪಿತರು ಯಾವುದೇ ಕಳುವು ಮಾಡದಿದ್ದರೂ ಊರಿನಲ್ಲಾಗಿದ್ದ ಎಲ್ಲಾ ಕಳುವು ಪ್ರಕರಣಗಳನ್ನು ಆರೋಪಿತರ ಮೇಲೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**